# ಭರತೇಂದು ಹರಿಚಂದ್ರ ಪ್ರಶಸ್ತಿಗಾಗಿ ಪ್ರವೇಶ ಸ್ವೀಕರಿಸುವಿಕೆ ಅವಧಿ ವಿಸ್ತರಣೆ

ನವದೆಹಲಿ :ನವೆಂಬರ್ 09,2005

2004 ರ ಸಾಲಿನ ಭರತೇಂದು ಹರಿಚಂದ್ರ ಪ್ರಶಸ್ತಿಗಾಗಿ ಪ್ರವೇಶ ಸ್ವೀಕರಿಸುವಿಕೆ ಕುರಿತಂತಹ ದಿನಾಂಕವನ್ನು ನವೆಂಬರ್ 30,2005 ರವರೆಗೆ ವಿಸ್ತರಿಸಲಾಗಿದೆ . ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗದ ಯೋಜನೆಯಾಗಿದ್ದು ಪ್ರಶಸ್ತಿಗಳನ್ನು ಪತ್ರಿಕೋದ್ಯಮ, ಸಮೂಹ ಮಾಧ್ಯಮ , ಮಹಿಳೆಯ ವಿಷಯಗಳು , ರಾಷ್ಟ್ರೀಯ ಏಕತೆ ಹಾಗೂ ಮಕ್ಕಳ ಸಾಹಿತ್ಯ ವಿಷಯಗಳಲ್ಲಿ ಹಿಂದಿ ಭಾಷೆಯಲ್ಲಿ ಪ್ರಕಟಗೊಂಡ ಪುಸ್ತಕ / ಹಸ್ತ ಪ್ರತಿಗಳಿಗೆ ನೀಡಲಾಗುವುದು .

ಭಾರತೀಯ ಲೇಖಕರುಗಾಗಿ ಈ ಪ್ರಶಸ್ತಿ . ಲೇಖಕರು ತಮ್ಮ ಪ್ರಕಾಶಿತ ಪುಸ್ತಕ ಹಾಗೂ ಟೈಪ್ ಮಾಡಲಾದ ಹಸ್ತ ಪ್ರತಿಗಳನ್ನು ಕಳುಹಿಸಿಕೊಡಬೇಕು . ಜನವರಿ 1 ರಿಂದ ಡಿಸೆಂಬರ್ 31, 2004 ರವರೆಗಿನ ಪುಸ್ತಕ / ಹಸ್ತಪ್ರತಿಗಳನ್ನು ಈ ಪ್ರಶಸ್ತಿಗಾಗಿ ಅರ್ಹವಾಗಿರುತ್ತವೆ .

ಪ್ರವೇಶಗಳನ್ನು ಉಪನಿರ್ದೇಶಕರು ( ಒ ಎಲ್)ಕೊಠಡಿ ಸಂಖ್ಯೆ 342, ಪ್ರಕಾಶನ ವಿಭಾಗ, ಸೂಚನಾ ಭವನ್, ಸಿ ಜಿ ಒ ಸಂಕೀರ್ಣ , ಲೋದಿ ರಸ್ತೆ, ನವದೆಹಲಿ –3 ಇವರಿಗೆ ನಮೂದಿಸಲಾದ ಅರ್ಜಿ ನಮೂನೆಯಲ್ಲಿ ಪುಸ್ತಕಗಳು/ ಹಸ್ತ ಪ್ರತಿಗಳ ಆರು ಪ್ರತಿಗಳನ್ನು , ಅಲ್ಲದೆ 10 ಡ 22 ಸೆಂಟಿ ಮೀಟರ್‌ಗಳ ಎರಡು ಅಂಚೆ ಚೀಟಿ ಲಕೋಟೆಗಳನ್ನು ಕಳುಹಿಸಿಕೊಡಬೇಕಾಗಿದೆ .

******

ಅದ: ಪಚ:ಪಾ: ಆ:ಕ: ಬೆಂ:16:40 09–11–2005